# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 722 (928) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.08.2026 |
| ಉತ್ತರಿಸಬೇಕಾದವರು | : | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ವಿದ್ಯಾಭ್ಯಾಸ ತೊರೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಹಾಗೂ ಲಿಂಗವಾರು ಮಾಹಿತಿ ಒದಗಿಸುವುದು) | ಕಳೆದ ಮೂರು ವರ್ಷಗಳಲ್ಲಿ ಶಾಲೆ/ಕಾಲೇಜು ತೊರೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಿದೆ. |
| ಆ) | ಆರ್ಥಿಕ ಕಾರಣ, ವಿದ್ಯಾರ್ಥಿನಿಲಯದ ಕೊರತೆ, ಸಾರಿಗೆ ಸಮಸ್ಯೆ ಹಾಗೂ ಕುಟುಂಬದ ಪರಿಸ್ಥಿತಿಯಿಂದ ವಿದ್ಯಾಭ್ಯಾಸ ತೊರೆಯುತ್ತಿರುವ ವಿದ್ಯಾರ್ಥಿಗಳ ಕುರಿತು ಸರ್ಕಾರ ಅಧ್ಯಯನ ನಡೆಸಿದೆಯೇ; ನಡೆಸಿದ್ದಲ್ಲಿ, ವರದಿ ಒದಗಿಸುವುದು; | • ವಿದ್ಯಾರ್ಥಿನಿಲಯಗಳ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಅವರು ಕೋರಿರುವ ಅಥವಾ ಸಮೀಪದ ವಿದ್ಯಾರ್ಥಿನಿಲಯಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 124 ಪಕವಿ 2019, ದಿನಾಂಕ:17.07.2019 ರನ್ವಯ ನಿಯಮಾನುಸಾರ ಪ್ರವೇಶ ನೀಡಲಾಗುತ್ತಿದೆ.<br>**ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರು ಕೈಗೊಂಡಿರುವ ಅಧ್ಯಯನದ ವಿವರ ಈ ಕೆಳಕಂಡಂತಿದೆ.**<br>• ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ಆಯ್ದ ಸರ್ಕಾರಿ ಶಾಲೆಗಳಲ್ಲಿನ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಸ್ಥಿತಿ, ಸಾಧನೆ, ಹಾಜರಾತಿ, ಕಲಿಕಾಸಕ್ತಿ, ತರಗತಿ ಭಾಗವಹಿಸುವಿಕೆ ಮತ್ತು ಕಲಿಕಾ ಫಲಿತಾಂಶದ ಅಧ್ಯಯನವನ್ನು ಕೈಗೊಂಡು ಶಾಲಾ ಮೂಲಸೌಕರ್ಯ, ಶಿಕ್ಷಕರ ಬೆಂಬಲ, ಶೈಕ್ಷಣಿಕ ಸೌಲಭ್ಯ ಹಾಗೂ ಆರ್ಥಿಕ-ಸಾಮಾಜಿಕ ಅಂಶಗಳ ಪ್ರಭಾವವನ್ನೂ ಪರಿಶೋಧಿಸಲಾಗಿದ್ದು, ಅಧ್ಯಯನದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿರುತ್ತದೆ.<br>**ಪ್ರಮುಖ ಫಲಿತಾಂಶಗಳು - ತರಗತಿವಾರು ಸರಾಸರಿ ಸಾಧನೆ (%):**<br>**ತರಗತಿ** — **ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು**<br>5ನೇ — 44.62%<br>7ನೇ — 50.78%<br>9ನೇ — 49.05%<br>**ಒಟ್ಟಾರೆ ಸರಾಸರಿ** — **48.15%**<br>• ಕನ್ನಡ ಮತ್ತು ಸಮಾಜ ವಿಜ್ಞಾನದಲ್ಲಿ ಅತಿ ಹೆಚ್ಚು ಸಾಧನೆ; ಗಣಿತದಲ್ಲಿ ಅತಿ ಕಡಿಮೆ ಸಾಧನೆ. |

| | | |
|---|---|---|
| | | • ಹಾಜರಾತಿ, ಪೋಷಕರ ಬೆಂಬಲ, ಆರ್ಥಿಕ-ಸಾಮಾಜಿಕ ಸ್ಥಿತಿ, ಶೈಕ್ಷಣಿಕ ಸಂಪನ್ಮೂಲ ಮತ್ತು ಶಾಲಾ ಸೌಲಭ್ಯಗಳು ಕಲಿಕಾ ಫಲಿತಾಂಶದ ಮೇಲೆ ಪ್ರಭಾವ ಬೀರುತ್ತವೆ.<br>**ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರು ಕೈಗೊಂಡಿರುವ ಕ್ರಮ:**<br>• ಆರ್ಥಿಕ ಕಾರಣ, ವಿದ್ಯಾರ್ಥಿನಿಲಯದ ಕೊರತೆ, ಸಾರಿಗೆ ಸಮಸ್ಯೆ ಹಾಗೂ ಕುಟುಂಬದ ಪರಿಸ್ಥಿತಿಯಿಂದಾಗಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ತೊರೆಯುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಈ ಸಂಬಂಧ ಯಾವುದೇ ಪ್ರತ್ಯೇಕ ಅಧ್ಯಯನವನ್ನು ಕೈಗೊಳ್ಳಲಾಗಿರುವುದಿಲ್ಲ. ವಿದ್ಯಾರ್ಥಿಗಳು ಎದುರಿಸುತ್ತಿರುವ ಸಂಚಾರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರಿ ಬಸ್ಸುಗಳ ಸಂಚಾರ ವ್ಯವಸ್ಥಾಪಕರನ್ನು ಹಾಗೂ ಸ್ಥಳೀಯ ಜನಪ್ರತಿನಿಧಿಗಳನ್ನು ಸಂಪರ್ಕಿಸುವ ಮೂಲಕ ಸಂಚಾರ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ಪ್ರಾಂಶುಪಾಲರುಗಳಿಗೆ ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಸೂಚನೆಗಳನ್ನು ನೀಡಲಾಗುತ್ತಿದೆ. |
| ಇ) | ಶಾಲೆ ಮತ್ತು ಕಾಲೇಜು ಮಟ್ಟದಲ್ಲಿ ವಿದ್ಯಾಭ್ಯಾಸ ತೊರೆಯುವ ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಿರುವ ಜಿಲ್ಲೆಗಳನ್ನು ಗುರುತಿಸಿ ವಿಶೇಷ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆಯೇ; | ಶಾಲಾ ಬಿಡುವ ಪ್ರಮಾಣ (Dropout Rate) ಕಡಿಮೆ ಮಾಡಲು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕೈಗೊಂಡಿರುವ ಕ್ರಮಗಳನ್ನು ಅನುಬಂಧ-3 ಮತ್ತು 4ರಲ್ಲಿ ಒದಗಿಸಿದೆ. |
| ಈ) | ವಿದ್ಯಾರ್ಥಿವೇತನ, ವಸತಿ, ಉಚಿತ ಸಾರಿಗೆ ಹಾಗೂ ಶೈಕ್ಷಣಿಕ ಪ್ರೋತ್ಸಾಹಧನದ ಮೂಲಕ ವಿದ್ಯಾರ್ಥಿಗಳನ್ನು ಶಿಕ್ಷಣದಲ್ಲಿ ಉಳಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | • ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಇಲಾಖಾವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಾಹಿತಿಯನ್ನು ಅನುಬಂಧ-5ರಲ್ಲಿ ಒದಗಿಸಿದೆ.<br>**ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕೈಗೊಂಡಿರುವ ಕ್ರಮಗಳು:**<br>• ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕೇಂದ್ರ ಶಿಕ್ಷಣ ಮಂತ್ರಾಲಯ ಕಾರ್ಯಕ್ರಮದ ಅಡಿಯಲ್ಲಿ ಅರಣ್ಯ ಪ್ರದೇಶ, ಗುಡ್ಡಗಾಡು ಪ್ರದೇಶ, ನದಿ ದಂಡೆಗಳು, ಕಾಲುವೆಗಳು ಹಾಗೂ ರಾಷ್ಟ್ರೀಯ/ರಾಜ್ಯ ಹೆದ್ದಾರಿಗಳನ್ನು ದಾಟಿ ಸಮೀಪದ ಶಾಲೆಗಳಿಗೆ ತೆರಳಬೇಕಾದಂತಹ ಪ್ರದೇಶಗಳಲ್ಲಿ, ಶಾಲೆಗಳ ಪ್ರವೇಶಾವಕಾಶ ಸೀಮಿತವಾಗಿರುವುದರಿಂದ, ಅಂತಹ ಮಕ್ಕಳಿಗೆ ಸಾರಿಗೆ ಭತ್ಯೆ (Transport and Escort Allowance) ಒದಗಿಸಲಾಗುತ್ತಿದೆ. ಇದರಿಂದ ಮಕ್ಕಳ ಶಾಲಾ ಹಾಜರಾತಿ ಹಾಗೂ ದಾಖಲಾತಿಯನ್ನು ಹೆಚ್ಚಿಸಿ, ಶಾಲೆಯಲ್ಲಿ ಮುಂದುವರಿಯುವಿಕೆಯನ್ನು ಖಾತ್ರಿಪಡಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಈ) | ವಿದ್ಯಾರ್ಥಿವೇತನ, ವಸತಿ, ಉಚಿತ ಸಾರಿಗೆ ಹಾಗೂ ಶೈಕ್ಷಣಿಕ ಪ್ರೋತ್ಸಾಹಧನದ ಮೂಲಕ ವಿದ್ಯಾರ್ಥಿಗಳನ್ನು ಶಿಕ್ಷಣದಲ್ಲಿ ಉಳಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | • ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಇಲಾಖಾ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಾಹಿತಿಯನ್ನು ಅನುಬಂಧ-5ರಲ್ಲಿ ಒದಗಿಸಿದೆ.<br>**ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕೈಗೊಂಡಿರುವ ಕ್ರಮಗಳು:**<br>• ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕೇಂದ್ರ ಶಿಕ್ಷಣ ಮಂತ್ರಾಲಯ ಕಾರ್ಯಕ್ರಮದ ಅಡಿಯಲ್ಲಿ, ಅರಣ್ಯ ಪ್ರದೇಶ, ಗುಡ್ಡಗಾಡು ಪ್ರದೇಶ, ನದಿದಂಡೆಗಳು, ಕಾಲುವೆಗಳು ಹಾಗೂ ರಾಷ್ಟ್ರೀಯ/ ರಾಜ್ಯಹೆದ್ದಾರಿಗಳನ್ನು ದಾಟಿ ಸಮೀಪದ ಶಾಲೆಗಳಿಗೆ ತೆರಳಬೇಕಾದಂತಹ ಪ್ರದೇಶಗಳಲ್ಲಿ ಶಾಲೆಗಳ ಪ್ರವೇಶಾವಕಾಶ ಸೀಮಿತವಾಗಿರುವುದರಿಂದ, ಅಂತಹ ಮಕ್ಕಳಿಗೆ ಸಾರಿಗೆ ಭತ್ಯೆ (Transport and Escort Allowance) ಒದಗಿಸಲಾಗುತ್ತಿದೆ. ಇದರಿಂದ ಮಕ್ಕಳ ಶಾಲಾ ಹಾಜರಾತಿ ಹಾಗೂ ದಾಖಲಾತಿಯನ್ನು ಹೆಚ್ಚಿಸಿ, ಶಾಲೆಯಲ್ಲಿ ಮುಂದುವರಿಯುವಿಕೆಯನ್ನು ಖಾತ್ರಿಪಡಿಸಲು ಕ್ರಮವಹಿಸಲಾಗುತ್ತಿದೆ.<br>**ಕಾಲೇಜು ಶಿಕ್ಷಣ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು:**<br>1. ವಿದ್ಯಾಭ್ಯಾಸ ಮಾಡುತ್ತಿರುವ ಅರ್ಹ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಇಲಾಖೆಯಿಂದ ಸಂಚಿಹೊನ್ನಮ್ಮ ವಿದ್ಯಾರ್ಥಿ ವೇತನ ಯೋಜನೆಯಡಿ ವಾರ್ಷಿಕ ರೂ.2000/-ಗಳ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು.<br>2. ವಿಜ್ಞಾನ ಪದವಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅರ್ಹಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಲಾಖೆಯಿಂದ ಸರ್.ಸಿ.ವಿ.ರಾಮನ್ ವಿದ್ಯಾರ್ಥಿವೇತನ ಯೋಜನೆಯಡಿ ವಾರ್ಷಿಕ ರೂ.5000/-ಗಳ ವಿದ್ಯಾರ್ಥಿವೇತನ ಪಾವತಿಸಲಾಗುವುದು.<br>3. ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹೆಚ್‌ಐವಿ/ ಲೆಪ್ರಸಿ ರೋಗ ಬಾಧಿತ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.21,940/- ಹಾಗೂ 22,880/-ರಂತೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.<br>4. ಉನ್ನತ ಶಿಕ್ಷಣದಲ್ಲಿ ಹೆಣ್ಣು ಮಕ್ಕಳನ್ನು ಪ್ರೋತ್ಸಾಹಿಸಲು ಸರ್ಕಾರಿ ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳಿಗೆ ಪ್ರವೇಶ ಪಡೆದ ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೆ ಶುಲ್ಕ ಮರು ಪಾವತಿ ಭರಿಸಲಾಗುತ್ತಿದೆ.<br>5. ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದು ಪದವಿ ಮತ್ತು ಸ್ನಾತಕೋತ್ತರ ಕೋರ್ಸ್ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಅವರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆಯುವ ಶೈಕ್ಷಣಿಕ ಸಾಲದ ಮೇಲಿನ ಬಡ್ಡಿಯನ್ನು ಬ್ಯಾಂಕುಗಳಿಗೆ ಇಲಾಖೆಯಿಂದ ಪಾವತಿಸಲಾಗುತ್ತದೆ. |

| | | |
|---|---|---|
| | | 6. ಉನ್ನತ ಶಿಕ್ಷಣ ಪಡೆಯ ಬಯಸುವ ಹಾಗೂ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳ ಪ್ರವೇಶಾತಿಯನ್ನು ಹೆಚ್ಚಿಸಲು SSLC ಮತ್ತು ದ್ವಿತೀಯ PUC ತರಗತಿಯನ್ನು ಸರ್ಕಾರಿ ಶಾಲೆ ಮತ್ತು ಸರ್ಕಾರಿ ಕಾಲೇಜುಗಳಲ್ಲಿ ಅಭ್ಯಾಸ ಮಾಡಿ ವಿವಿಧ ಪದವಿ ತರಗತಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರಿಗೆ ದೀಪಿಕಾ ವಿದ್ಯಾರ್ಥಿವೇತನ ಯೋಜನೆಯಡಿ ಅಜೀಂ ಪ್ರೇಂಜಿ ವಿದ್ಯಾರ್ಥಿವೇತನದ ಪೂರಕ ವಿದ್ಯಾರ್ಥಿವೇತನ ಯೋಜನೆಯಡಿ ವಾರ್ಷಿಕ ರೂ30,000/-ಗಳ ವಿದ್ಯಾರ್ಥಿವೇತನ ನೀಡಲಾಗುತ್ತಿದೆ. |

**STW/SECB/STC/222/2026**

(ಟಿ. ರಘುಮೂರ್ತಿ)

ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಅನುಬಂಧ-1

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 722 (928)ಕ್ಕೆ ಮಾಹಿತಿ

## ಶಾಲೆ ತೊರೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವರ್ಷವಾರು ಮಾಹಿತಿ (ಸಮಗ್ರ ಶಿಕ್ಷಣ ಕರ್ನಾಟಕ ರವರ ಮಾಹಿತಿ)

| ಕ್ರ.ಸಂ. | ಜಿಲ್ಲೆ | 2024-25 | 2025-26 | 2026-27 |
|---|---|---|---|---|
| 1 | ಬಾಗಲಕೋಟೆ | 3 | 2 | 63 |
| 2 | ಬಳ್ಳಾರಿ | 31 | 66 | 37 |
| 3 | ಬೆಳಗಾವಿ | 18 | 5 | 10 |
| 4 | ಬೆಳಗಾವಿ ಚಿಕ್ಕೋಡಿ | 8 | 0 | 2 |
| 5 | ಬೆಂಗಳೂರು ಗ್ರಾಮಾಂತರ | 5 | 0 | 40 |
| 6 | ಬೆಂಗಳೂರು ಉತ್ತರ | 63 | 2 | 8 |
| 7 | ಬೆಂಗಳೂರು ದಕ್ಷಿಣ | 50 | 31 | 1 |
| 8 | ಬೀದರ್ | 5 | 55 | 12 |
| 9 | ಚಾಮರಾಜನಗರ | 59 | 25 | 9 |
| 10 | ಚಿಕ್ಕಬಳ್ಳಾಪುರ | 16 | 1 | 82 |
| 11 | ಚಿಕ್ಕಮಗಳೂರು | 14 | 3 | 30 |
| 12 | ಚಿತ್ರದುರ್ಗ | 46 | 69 | 50 |
| 13 | ದಕ್ಷಿಣಕನ್ನಡ | 7 | 1 | 5 |
| 14 | ದಾವಣಗೆರೆ | 75 | 32 | 75 |
| 15 | ಧಾರವಾಡ | 7 | 1 | 44 |
| 16 | ಗದಗ | 4 | 2 | 0 |
| 17 | ಹಾಸನ | 10 | 2 | 1 |
| 18 | ಹಾವೇರಿ | 9 | 2 | 3 |
| 19 | ಕಲಬುರಗಿ | 2 | 0 | 237 |
| 20 | ಕೊಡಗು | 19 | 0 | 0 |
| 21 | ಕೋಲಾರ | 9 | 1 | 0 |
| 22 | ಕೊಪ್ಪಳ | 179 | 327 | 102 |
| 23 | ಮಂಡ್ಯ | 5 | 6 | 2 |
| 24 | ಮೈಸೂರು | 13 | 37 | 12 |
| 25 | ರಾಯಚೂರು | 37 | 64 | 5 |
| 26 | ಬೆಂಗಳೂರು ದಕ್ಷಿಣ (ರಾಮಗರ) | 3 | 2 | 9 |
| 27 | ಶಿವಮೊಗ್ಗ | 13 | 4 | 79 |
| 28 | ತುಮಕೂರು | 7 | 5 | 1 |
| 29 | ತುಮಕೂರು ಮಧುಗಿರಿ | 9 | 11 | 100 |
| 30 | ಉಡುಪಿ | 29 | 3 | 0 |
| 31 | ಉತ್ತರಕನ್ನಡ | 1 | 0 | 1 |
| 32 | ಉತ್ತರಕನ್ನಡ ಸಿರ್ಸಿ | 14 | 0 | 17 |
| 33 | ವಿಜಯನಗರ | 22 | 42 | 46 |
| 34 | ವಿಜಯಪುರ | 0 | 4 | 0 |
| 35 | ಯಾದಗಿರಿ | 66 | 2 | 35 |

ನಿರ್ದೇಶಕರು

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,

ಬೆಂಗಳೂರು

ಅನುಬಂಧ-2

# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 722 (928)ಕ್ಕೆ ಮಾಹಿತಿ

## ಕಾಲೇಜು ತೊರೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವರ್ಷವಾರು ಮಾಹಿತಿ (ಕಾಲೇಜು ಶಿಕ್ಷಣ ಇಲಾಖೆಯ ಮಾಹಿತಿ)

| Sl. No | District Name | 2023-24 | | | | | | 2024-25 | | | | | | 2025-26 | | | | | | TOTAL | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | No. of ST students admitted for Degree Courses in Govt. Colleges | | | No. of ST students dropped out of those admitted to Degree Courses in Govt. Colleges | | | No. of ST students admitted for Degree Courses in Govt. Colleges | | | No. of ST students dropped out of those admitted to Degree Courses in Govt. Colleges | | | No. of ST students admitted for Degree Courses in Govt. Colleges | | | No. of ST students dropped out of those admitted to Degree Courses in Govt. Colleges | | | Total No. of ST students admitted for Degree Courses in Govt. Colleges | | | Total No. of ST students dropped out of those admitted to Degree Courses in Govt. Colleges | | |
| | | Male | Female | Total | Male | Female | Total | Male | Female | Total | Male | Female | Total | Male | Female | Total | Male | Female | Total | Male | Female | Total | Male | Female | Total |
| 1 | Bagalkote | 192 | 235 | 427 | 57 | 62 | 119 | 175 | 203 | 378 | 47 | 27 | 74 | 92 | 209 | 301 | 4 | 13 | 17 | 459 | 647 | **1106** | 108 | 102 | **210** |
| 2 | Ballari | 531 | 293 | 824 | 169 | 49 | 218 | 466 | 335 | 801 | 111 | 53 | 164 | 337 | 299 | 636 | 24 | 17 | 41 | 1334 | 927 | **2261** | 304 | 119 | **423** |
| 3 | Belagavi | 173 | 231 | 404 | 68 | 68 | 136 | 138 | 236 | 374 | 35 | 50 | 85 | 112 | 286 | 398 | 2 | 12 | 14 | 423 | 753 | **1176** | 105 | 130 | **235** |
| 4 | Bengaluru Rural | 89 | 102 | 191 | 30 | 34 | 64 | 67 | 69 | 136 | 20 | 20 | 40 | 53 | 84 | 137 | 7 | 6 | 13 | 209 | 255 | **464** | 57 | 60 | **117** |
| 5 | Bengaluru South | 20 | 33 | 53 | 7 | 10 | 17 | 12 | 36 | 48 | 3 | 7 | 10 | 16 | 26 | 42 | 1 | 1 | 2 | 48 | 95 | **143** | 11 | 18 | **29** |
| 6 | Bengaluru Urban | 342 | 324 | 666 | 73 | 55 | 128 | 340 | 283 | 623 | 71 | 47 | 118 | 319 | 299 | 618 | 25 | 16 | 41 | 1001 | 906 | **1907** | 169 | 118 | **287** |
| 7 | Bidar | 260 | 316 | 576 | 93 | 64 | 157 | 153 | 196 | 349 | 29 | 27 | 56 | 151 | 238 | 389 | 8 | 15 | 23 | 564 | 750 | **1314** | 130 | 106 | **236** |
| 8 | Chamarajanagara | 85 | 71 | 156 | 30 | 18 | 48 | 106 | 88 | 194 | 24 | 15 | 39 | 79 | 90 | 169 | 9 | 5 | 14 | 270 | 249 | **519** | 63 | 38 | **101** |
| 9 | Chikkaballapura | 173 | 216 | 389 | 63 | 60 | 123 | 146 | 250 | 396 | 45 | 59 | 104 | 133 | 210 | 343 | 19 | 16 | 35 | 452 | 676 | **1128** | 127 | 135 | **262** |
| 10 | Chikkamagaluru | 70 | 81 | 151 | 23 | 21 | 44 | 61 | 51 | 112 | 12 | 12 | 24 | 49 | 83 | 132 | 3 | 6 | 9 | 180 | 215 | **395** | 38 | 39 | **77** |
| 11 | Chitradurga | 409 | 433 | 842 | 117 | 106 | 223 | 330 | 370 | 700 | 63 | 63 | 126 | 233 | 371 | 604 | 9 | 22 | 31 | 972 | 1174 | **2146** | 189 | 191 | **380** |
| 12 | Dakshina kannada | 57 | 141 | 198 | 20 | 12 | 32 | 63 | 190 | 253 | 10 | 32 | 42 | 55 | 172 | 227 | 16 | 14 | 30 | 175 | 503 | **678** | 46 | 58 | **104** |
| 13 | Davangere | 281 | 289 | 570 | 80 | 75 | 155 | 229 | 301 | 530 | 70 | 65 | 135 | 149 | 265 | 414 | 10 | 21 | 31 | 659 | 855 | **1514** | 160 | 161 | **321** |
| 14 | Dharwad | 111 | 130 | 241 | 38 | 18 | 56 | 97 | 151 | 248 | 16 | 26 | 42 | 101 | 172 | 273 | 6 | 9 | 15 | 309 | 453 | **762** | 60 | 53 | **113** |
| 15 | Gadag | 60 | 93 | 153 | 18 | 35 | 53 | 74 | 107 | 181 | 17 | 18 | 35 | 46 | 94 | 140 | 6 | 9 | 15 | 180 | 294 | **474** | 41 | 62 | **103** |
| 16 | Hassan | 50 | 76 | 126 | 17 | 24 | 41 | 50 | 88 | 138 | 11 | 17 | 28 | 53 | 92 | 145 | 6 | 6 | 12 | 153 | 256 | **409** | 34 | 47 | **81** |

| | | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| 17 | Haveri | 243 | 188 | 431 | 89 | 63 | 152 | 169 | 163 | 332 | 54 | 36 | 90 | 158 | 196 | 354 | 24 | 14 | 38 | 570 | 547 | **1117** | 167 | 113 | **280** |
| 18 | Kalaburagi | 142 | 126 | 268 | 46 | 33 | 79 | 110 | 118 | 228 | 30 | 27 | 57 | 63 | **84** | 147 | 4 | 11 | 15 | 315 | 328 | **643** | 80 | 71 | **51** |
| 19 | Kodagu | 36 | 41 | 77 | 15 | 9 | 24 | 27 | 55 | 82 | 11 | 18 | 29 | 26 | 43 | 69 | 1 | 6 | 7 | 89 | 139 | **228** | 27 | 33 | **60** |
| 20 | Kolar | 122 | 136 | 258 | 35 | 34 | 69 | 116 | **154** | 270 | 38 | 33 | 71 | 76 | **133** | 209 | 5 | 7 | **12** | 314 | 423 | **737** | **78** | **74** | **152** |
| 21 | Koppal | 387 | 280 | 667 | 133 | 68 | 201 | 385 | 280 | 665 | 101 | 54 | 155 | 290 | 240 | 530 | 23 | 10 | 33 | 1062 | 800 | **1862** | 257 | 132 | **389** |
| 22 | Mandya | 30 | 39 | 69 | 16 | 10 | 26 | 22 | 34 | 56 | 9 | 9 | 18 | 16 | 28 | 44 | 1 | 0 | 1 | 68 | 101 | **169** | 26 | 19 | **45** |
| 23 | Mysuru | 465 | 715 | 1180 | 147 | 182 | 329 | 388 | 797 | 1185 | 85 | 134 | 219 | 314 | 755 | 1069 | 22 | 32 | 54 | 1167 | 2267 | **3434** | 254 | 348 | **602** |
| 24 | Raichur | 507 | 405 | 912 | 175 | 93 | 268 | 310 | 334 | 644 | 81 | 48 | 129 | 202 | 300 | 502 | 10 | 6 | 16 | 1019 | 1039 | **2058** | 266 | 147 | **413** |
| 25 | Shivamogga | 99 | 115 | 214 | 34 | 27 | 61 | 87 | 119 | 206 | 26 | 29 | 55 | 76 | 136 | 212 | 8 | 6 | 14 | 262 | 370 | **632** | 68 | 62 | **130** |
| 26 | Tumakuru | 264 | 339 | 603 | 98 | 108 | 206 | 180 | 325 | 505 | 62 | 81 | 143 | 189 | 354 | 543 | 26 | 27 | 53 | 633 | 1018 | **1651** | 186 | 216 | **402** |
| 27 | Udupi | 63 | 129 | 192 | 23 | 19 | 42 | 66 | 123 | 189 | 12 | 20 | 32 | 49 | 117 | 166 | 10 | 9 | 19 | 178 | 369 | **547** | 45 | 48 | **93** |
| 28 | Uttara kannada | 48 | 64 | 112 | 13 | 11 | 24 | 48 | 56 | 104 | 16 | 15 | 31 | 37 | 53 | 90 | 5 | 6 | 11 | 133 | 173 | **306** | 34 | 32 | **66** |
| 29 | VIJAYANAGAR | 316 | 254 | 570 | 105 | 64 | 169 | 224 | 227 | 451 | 69 | 41 | 110 | 216 | 258 | 474 | 16 | 14 | 30 | 756 | 739 | **1495** | 190 | 119 | **309** |
| 30 | Vijayapura | 107 | 97 | 204 | 53 | 27 | 80 | 79 | 134 | 213 | 23 | 34 | 57 | 87 | 139 | 226 | 4 | 10 | 14 | 273 | 370 | **643** | 80 | 71 | **151** |
| 31 | Yadgir | 225 | 117 | 342 | 70 | 34 | 104 | 125 | 78 | 203 | 24 | 12 | 36 | 69 | 74 | 143 | 2 | 3 | 5 | 419 | 269 | **688** | 96 | 49 | **145** |

ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

**ಅನುಬಂಧ-3**

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 722 (928)ಕ್ಕೆ ಮಾಹಿತಿ

## ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಶಾಲಾ ಬಿಡುವ ಪ್ರಮಾಣ (Dropout Rate) ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳು:

- ಪ್ರತಿ ವರ್ಷ ಸಮೀಕ್ಷೆಯಲ್ಲಿ ಗುರುತಿಸಲಾದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಹತ್ತಿರದ ಶಾಲೆಗಳಲ್ಲಿ ದಾಖಲಾತಿ ಆಂದೋಲನದ ಹಾಗೂ ಸಾಮಾನ್ಯ ದಾಖಲಾತಿ ಆಂದೋಲನದ ಮೂಲಕ ಮುಖ್ಯವಾಹಿನಿಗೆ ತರಲಾಗಿದೆ. ಅವರಿಗೆ ಬ್ರಿಡ್ಜ್ ಕೋರ್ಸ್ ಮತ್ತು ಪರಿಹಾರ ಬೋಧನೆಯ ಮೂಲಕ ಶಾಲಾ ಆಧಾರಿತ ತರಬೇತಿ (SBT) ನೀಡಲಾಗುವುದು ಮತ್ತು ಈ ಮಕ್ಕಳನ್ನು ವಯೋಮಾನಕ್ಕನುಗುಣವಾಗಿ ತರಗತಿಗಳಿಗೆ ದಾಖಲಿಸಲಾಗುವುದು.
- ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಪ್ರವೇಶ ಅವಕಾಶವಿಲ್ಲದ ಪ್ರದೇಶಗಳಲ್ಲಿ ಹೊಸ ಸರ್ಕಾರಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತದೆ. ಜೊತೆಗೆ ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆ ಮತ್ತು ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜು (XI & XII ತರಗತಿ) ಗೆ ಉನ್ನತೀಕರಿಸಲಾಗುತ್ತದೆ. ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ ಶಿಕ್ಷಣ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಇದು ಒಂದು ನಿರ್ಣಾಯಕ ಹೆಜ್ಜೆಯಾಗಿದೆ.
- ಸಮೀಕ್ಷೆಯಲ್ಲಿ ಗುರುತಿಸಲಾದ ಬೀದಿ ಮಕ್ಕಳು, ನಗರ ವಂಚಿತ, ಚಿಂದಿ ಆಯುವವರು, ಬಾಲ ಕಾರ್ಮಿಕರು, ಅನಾರೋಗ್ಯ ಪೀಡಿತ ಮಕ್ಕಳು, ವಿಶೇಷ ಅಗತ್ಯವಿರುವ ಮಕ್ಕಳು, ಅನಾಥರು, ಇತರ ರಾಜ್ಯಗಳು ಅಥವಾ ಜಿಲ್ಲೆಗಳಿಂದ ವಲಸೆ ಬಂದ ಮಕ್ಕಳಿಗೆ ವಿಶೇಷ ತರಬೇತಿ ನೀಡಿ ಕಲಿಕೆಯ ಮಟ್ಟವನ್ನು ಆಧರಿಸಿ ನೇತಾಜಿ ಅವಾಸಿಯ ವಿದ್ಯಾಲಯ, ಚಿಣ್ಣರ ತಂಗುಧಾಮ (Transit Homes), ಕೆಜಿಬಿವಿ ಶಾಲೆಗಳು, ಕೆಕೆಜಿಬಿವಿ (Hostels) ವಸತಿ ಶಾಲೆಗಳಲ್ಲಿ ದಾಖಲಿಸಲಾಗುವುದು.
- ವಿಶೇಷ ಅಗತ್ಯವಿರುವ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿಶೇಷ ಶಿಕ್ಷಕರ ಬೆಂಬಲವನ್ನು ಒದಗಿಸಲಾಗುತ್ತಿದೆ. ಅಂಗವೈಕಲ್ಯದ ಆಧಾರದ ಮೇಲೆ ವಿದ್ಯಾರ್ಥಿ ನಿರ್ದಿಷ್ಟ ಭತ್ಯೆಗಳಾದ ಸಾರಿಗೆ ಭತ್ಯೆ, ಬೆಂಗಾವಲು ಭತ್ಯೆ, ಓದುಗರ ಭತ್ಯೆ ಮತ್ತು ಹೆಣ್ಣು ಮಕ್ಕಳ ಭತ್ಯೆಯನ್ನು ಒದಗಿಸಲಾಗುತ್ತಿದೆ. ತೀವ್ರ ಅಂಗವೈಕಲ್ಯ ಅಥವಾ ತೀವ್ರ ಲೊಕೊ ಮೋಟಾರ್ ಅಂಗವೈಕಲ್ಯದ ಸಂದರ್ಭದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಅಗತ್ಯ ಕೌಶಲ್ಯ ತರಬೇತಿಯೊಂದಿಗೆ ಮನೆ ಆಧಾರಿತ ಶಿಕ್ಷಣವನ್ನು ಒದಗಿಸಲಾಗುವುದು.
- ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು "ವಲಸೆ ಮಕ್ಕಳು ಮತ್ತು ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣ ಹಕ್ಕು ನೀತಿ 2019" ಅನುಷ್ಠಾನದ ಕುರಿತು ನೀತಿಯನ್ನು ರೂಪಿಸಿದೆ. ಸದರಿ ನೀತಿಯನ್ನು ರಚಿಸಿರುವ ದೇಶದಲ್ಲಿ ಕರ್ನಾಟಕವು ಮೊದಲನೆಯ ರಾಜ್ಯವಾಗಿದೆ.
- ಮಕ್ಕಳ ಹಾಜರಾತಿಯನ್ನು ಉತ್ತೇಜಿಸಲು, ಇಲಾಖೆಯು ವಿದ್ಯಾ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟ, ಹಾಲು, ಮೊಟ್ಟೆ, ಬಾಳೆಹಣ್ಣು, ಪಠ್ಯ ಪುಸ್ತಕಗಳು, Work Book, ಟಿಎಲ್‌ಎಂ, ಶೂ-ಸಾಕ್ಸ್, ಎರಡು ಸಮವಸ್ತ್ರಗಳು ಮತ್ತು Vitamin ಮಾತ್ರೆಗಳು ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದೆ.

- ಶಾಲೆಗಳಲ್ಲಿ ಮಕ್ಕಳನ್ನು ಉಳಿಸಿಕೊಳ್ಳಲು ಪ್ರತಿಭಾ ಕಾರಂಜಿ ಕಾರ್ಯಕ್ರಮದಡಿಯಲ್ಲಿ ಶಾಲೆಗಳಲ್ಲಿರುವ ಎಲ್ಲಾ ಮಕ್ಕಳು ವಿವಿಧ ಹಂತಗಳಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತದೆ.
- ಪ್ರತಿ ವರ್ಷ ಶಿಕ್ಷಣ ಮಂತ್ರಾಲಯದಿಂದ PAB ಯಲ್ಲಿ ಅನುಮೋದಿತ ಕಾರ್ಯಕ್ರಮದ ಅಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು 3/6/9/12 ತಿಂಗಳ ವಸತಿ ರಹಿತ ಹಾಗೂ ವಸತಿ ಸಹಿತ ವಿಶೇಷ ತರಬೇತಿಗಳನ್ನು ಆಯೋಜಿಸಲಾಗುವುದು.
- 16 ರಿಂದ 19 ವಯೋಮಾನದ ಶಾಲೆಯಿಂದ ಹೊರಗುಳಿದ ಹಾಗೂ ದಾಖಲಾಗದ ಮಕ್ಕಳಿಗೆ ರಾಷ್ಟ್ರೀಯ ಮುಕ್ತ ಶಾಲಾ ವ್ಯವಸ್ಥೆಯ (NIOS) ಹಾಗೂ ಕರ್ನಾಟಕ ಮುಕ್ತ ಶಾಲೆ (KOS) ಮೂಲಕ ಪರೀಕ್ಷೆಗೆ ನೋಂದಣಿ ಮಾಡಲು ಬ್ಲಾಕ್ ಹಂತದಲ್ಲಿ KPS ಶಾಲೆಗಳು ಮತ್ತು ಜೂನಿಯರ್ ಕಾಲೇಜುಗಳಲ್ಲಿ 220 ಅಧ್ಯಯನ ಕೇಂದ್ರಗಳನ್ನು ಗುರುತಿಸಲಾಗಿದೆ.
- ಶಾಲೆಯಿಂದ ಹೊರಗುಳಿದ ಮತ್ತು ಶಾಲೆಗೆ ದಾಖಲಾಗದ ಮಕ್ಕಳನ್ನು ಗುರುತಿಸುವ, ದಾಖಲಿಸುವ ಮತ್ತು ಶೈಕ್ಷಣಿಕ ಮುಖ್ಯವಾಹಿನಿಗೆ ತರುವ ಕಾರ್ಯವು ನಿರಂತರ ಪ್ರಕ್ರಿಯೆಯಾಗಿದ್ದು, ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ.

ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

**ಅನುಬಂಧ-4**

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 722 (928)ಕ್ಕೆ ಮಾಹಿತಿ**

**ಕಾಲೇಜು ಶಿಕ್ಷಣ ಇಲಾಖೆಯಿಂದ ಕಾಲೇಜು ಬಿಡುವ ಪ್ರಮಾಣ (Dropout Rate) ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳು:**

- ಇಲಾಖಾ ವ್ಯಾಪ್ತಿಗೊಳಪಡುವ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಮೊದಲನೇ ವರ್ಷದಲ್ಲಿ ಪ್ರವೇಶ ಪಡೆದು ತದನಂತರದಲ್ಲಿ Drop-Out ಆಗುತ್ತಿರುವುದನ್ನು ಗಮನಿಸಲಾಗಿ, ಈ ಸಂಬಂಧ Online ಮೂಲಕ ಸಭೆಯನ್ನು ನಡೆಸಿ ಎಲ್ಲ ಕಾಲೇಜುಗಳ ಪ್ರಾಂಶುಪಾಲರು ಮತ್ತು ಜಂಟಿ ನಿರ್ದೇಶಕರು ಗಳಿಗೆ ಈ ಸಂಬಂಧ ಪರಿಶೀಲಿಸಿ ವಿದ್ಯಾರ್ಥಿಗಳು Drop-Out ಆಗುವುದಕ್ಕೆ ಇರುವ ಕಾರಣಗಳನ್ನು ಮತ್ತು ಕುಂದು ಕೊರತೆಗಳು ಹಾಗೂ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ ಸದರಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರೆಸುವಂತೆ ಉತ್ತೇಜಿಸುವಂತೆ ಪ್ರಾಂಶುಪಾಲರುಗಳಿಗೆ V.C. ಮೂಲಕ ಸೂಚಿಸಲಾಗುತ್ತಿದೆ.
- ಅದರಂತೆ ಕಾಲೇಜುಗಳಲ್ಲಿ ಪ್ರಾಂಶುಪಾಲರು, ಪ್ರವೇಶಾತಿ ಸಮಿತಿ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯು ವಿದ್ಯಾರ್ಥಿ ಹಾಗೂ ಪೋಷಕರೊಂದಿಗೆ ಪರಸ್ಪರ ಸಮಾಲೋಚನೆನಡೆಸಿ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಮುಂದುವರೆಸಲು ಉತ್ತೇಜಿಸಲಾಗುತ್ತಿದೆ. ಅಲ್ಲದೇ ವಿದ್ಯಾರ್ಥಿಗಳಿಗೆ ಸರ್ಕಾರಿ ಕಾಲೇಜುಗಳಲ್ಲಿ ಇರುವಂತಹ ವಿಶೇಷ ವಿದ್ಯಾರ್ಥಿವೇತನಗಳು, ಶುಲ್ಕ ವಿನಾಯಿತಿ ಸೌಲಭ್ಯಗಳು, ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಇರುವ ಸೌಲಭ್ಯಗಳು, ಪದವಿ ನಂತರದ ಉದ್ಯೋಗಾವಕಾಶಗಳ ಕುರಿತು, ಹಲವಾರು ಉದ್ಯೋಗ ಮೇಳಗಳ ಆಯೋಜನೆಯ ಕುರಿತು, ಕೌಶಲ್ಯ ತರಬೇತಿ ಇಂತಹ ಹಲವಾರು ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಿ ವಿದ್ಯಾಭ್ಯಾಸವನ್ನು ಮುಂದುವರೆಸುವಂತೆ ಪ್ರೇರಪಿಸಲಾಗುತ್ತಿದೆ.

ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

ಅನುಬಂಧ-5

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 722 (928)ಕ್ಕೆ ಮಾಹಿತಿ

**ಶೈಕ್ಷಣಿಕ ಕಾರ್ಯಕ್ರಮಗಳ ವಿವರ:**

1. **ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ :**

| ವರ್ಷ | ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ನೀಡಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| **1 ರಿಂದ 8ನೇ ತರಗತಿ (ರಾಜ್ಯವಲಯಕಾರ್ಯಕ್ರಮ ಶೇ.100% ರಾಜ್ಯದಪಾಲು)** | | | |
| 2023-24 | 308478 | 240579 | 2753.10 |
| 2024-25 | 295231 | 264391 | 3026.59 |
| 2025-26 | 255205 | 234616 | 2698.84 |
| **ಒಟ್ಟು** | **858914** | **739586** | **8478.53** |
| **9 & 10ನೇ ತರಗತಿ (ಕೇಂದ್ರ ಪುರಸ್ಕೃತ ಯೋಜನೆ) (ಕೇಂದ್ರದ ಪಾಲು ಶೇ.75%, ರಾಜ್ಯದ ಪಾಲು ಶೇ.25%)** | | | |
| 2023-24 | 104827 | 93539 | 2813.40 |
| 2024-25 | 104735 | 97512 | 2925.36 |
| 2025-26 | 72844 | 33942 * | 1018.26 * |
| **ಒಟ್ಟು** | **282406** | **224993** | **6757.02** |

2. **ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ**

| ವರ್ಷ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ನೀಡಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 2023-24 | 124828 | 18852.03 |
| 2024-25 | 127294 | 22044.86 |
| 2025-26 | 120139 | 24918.79 |
| **ಒಟ್ಟು** | **372261** | **65815.68** |

3. **ಎಸ್.ಎಸ್.ಎಲ್.ಸಿ ಪ್ರೋತ್ಸಾಹಧನ**

| ಕ್ರ. ಸಂ | ವರ್ಷ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2023-24 | 28068 | 3069.48 |
| 2 | 2024-25 | 16383 | 1682.24 |
| 3 | 2025-26 | 16430 | 1806.90 |
| ಒಟ್ಟು | | **60881** | **6558.62** |

4. **ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ**

| ಕ್ರ. ಸಂ | ವರ್ಷ | ಮಂಜೂರಾತಿನೀಡಿದ ಅರ್ಜಿಗಳಸಂಖ್ಯೆ | ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2023-24 | 26215 | 6163.10 |
| 2 | 2024-25 | 26507 | 6341.68 |
| 3 | 2025-26 | 21260 | 5102.41 |
| ಒಟ್ಟು | | **73982** | **17607.19** |

5. 1 ರಿಂದ 5ನೇ ವಿಶ್ವವಿದ್ಯಾಲಯ ಮಟ್ಟದಲ್ಲಿ ರ್‍ಯಾಂಕ್ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ

| ಕ್ರ. ಸಂ | ವರ್ಷ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2023-24 | 55 | 27.50 |
| 2 | 2024-25 | 83 | 41.50 |
| 3 | 2025-26 | 87 | 43.50 |
| ಒಟ್ಟು | | **225** | **112.5** |

6. ಐ.ಐ.ಟಿ/ಐ.ಐ.ಎಂ/ಎನ್.ಐ.ಟಿ ಇತ್ಯಾದಿ ರಾಷ್ಟ್ರೀಯ ಪ್ರಸಿದ್ಧವಾದ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ

| ಕ್ರ. ಸಂ | ವರ್ಷ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2023-24 | 38 | 33.94 |
| 2 | 2024-25 | 24 | 22.72 |
| 3 | 2025-26 | 81 | 76.10 |
| ಒಟ್ಟು | | **143** | **132.76** |

7. ಸ್ವಾತಂತ್ರ್ಯ ಹೋರಾಟದ ಭಾಗವಾದ ಹಲಗಲಿ ಬೇಡರ ಬಂಡಾಯದಲ್ಲಿ ಹುತಾತ್ಮರಾದ ಜಡಗ ಮತ್ತು ಬಾಲ ಇವರ ಹೆಸರಿನಲ್ಲಿ ಪ್ರತಿ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ.

| ಕ್ರ. ಸಂ | ವರ್ಷ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2023-24 | 34 | 34.00 |
| 2 | 2024-25 | 34 | 34.00 |
| 3 | 2025-26 | 34 | 34.00 |
| ಒಟ್ಟು | | **102** | **102.00** |

8. ರಾಜ್ಯಾದ್ಯಂತ ಪ್ರತಿಷ್ಠಿತ ಶಾಲೆಗಳಲ್ಲಿ ನವೀನ ಮತ್ತು ನವೀಕರಣ ಪ್ರತಿಭಾವಂತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ಹಾಗೂ ನಿರ್ವಹಣಾ ವೆಚ್ಚ

| ಕ್ರ. ಸಂ | ವರ್ಷ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2023-24 | 2954 | 1725.68 |
| 2 | 2024-25 | 2723 | 1682.93 |
| 3 | 2025-26 | 3748 | 1501.51 |
| ಒಟ್ಟು | | **9425** | **4910.12** |

9. ಡಾ.ಬಿ.ಆರ್ .ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯಡಿ ಮಂಜೂರಾತಿ ನೀಡಿರುವ ವಿದ್ಯಾರ್ಥಿವೇತನದ ವಿವರ

| ಕ್ರ. ಸಂ | ವರ್ಷ | ಮಂಜೂರಾತಿ ನೀಡಿದ ಅರ್ಜಿಗಳ ಸಂಖ್ಯೆ | ಮಂಜೂರಾತಿ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2023-24 | 33 | 1800.00 |
| 2 | 2024-25 | 37 | 1750.00 |
| 3 | 2025-26 | 52 | 3955.19 |
| ಒಟ್ಟು | | **122** | **7505.19** |

10. **ಪ.ಪಂಗಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹ ನೀಡಲು ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ ಮತ್ತು ವಿದ್ಯಾರ್ಥಿನಿಲಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ವಿವರ ಈ ಕೆಳಕಂಡಂತಿದೆ.**

| ಕ್ರ.ಸಂ. | ಸಂಸ್ಥೆಗಳ ವಿವರ | ಸಂಖ್ಯೆ |
|---|---|---|
| 1. | ವಾಲ್ಮೀಕಿ ಆಶ್ರಮ ಶಾಲೆ | 119 |
| 2. | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ | 135 |
| 3. | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ | 169 |
| | **ಒಟ್ಟು** | **423** |

❖ 52894 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿದೆ.

**ನಿಲಯಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ**

| **ವಿವರ** | **ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ಶಾಲೆ** | **ಮೆ.ಪೂರ್ವ ವಿ.ನಿಲಯ** | **ಮೆ.ನಂತರ ವಿ.ನಿಲಯ** |
|---|---|---|---|
| ಭೋಜನ ವೆಚ್ಚ (ಮಾಸಿಕ) | 1,550/- | 1,750/- | 1,850/- |

❖ **ಇತರೆ ಸೌಲಭ್ಯಗಳು**

ಸಮವಸ್ತ್ರ, (2ಜೊತೆ), ಪಠ್ಯ/ನೋಟ್ ಪುಸ್ತಕ, ಶುಚಿ ಸಂಭ್ರಮ ಕಿಟ್, ಶೂ, ಕ್ಷೌರ ವೆಚ್ಚ, ದಿನಪತ್ರಿಕೆ/ Magazine ವೈದ್ಯಕೀಯ ವೆಚ್ಚ, ಹಾಸಿಗೆ, ಹೊದಿಕೆ, ದಿಂಬು, ಜಮಖಾನ, ಕ್ರೀಡಾ ಸಾಮಗ್ರಿಗಳು ಹಾಗೂ ಇತರ ಮೂಲಭೂತ ಸೌಲಭ್ಯಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು